# “ಸಮುದ್ರ ಮಾತನಾಡುತ್ತದೆ...”

ಸಮುದ್ರ ಮಾತನಾಡುತ್ತದೆ,

ಕಿವಿಗೊಟ್ಟು ಕೇಳಿಸಿಕೊಳ್ಳಿ, ಸಮುದ್ರ ಮಾತನಾಡುತ್ತದೆ. ಭೋರ್ಗರೆಯುವ ಅಲೆಗಳು ತೀರಕ್ಕೆ ತಂದು ಚೆಲ್ಲುವ ಚಿಪ್ಪುಗಳ ಕತೆಗಳನ್ನೆಲ್ಲ ಹೇಳುತ್ತದೆ. ಸಕ್ಕರೆ ಮರಳಿನ ಮೇಲೆಲ್ಲ ಚೆಲ್ಲಿದ ಕಸ, ಬೂಟು, ಶರಟು, ಹಗ್ಗ, ಬಲೆ, ಪ್ಲಾಸ್ಟಿಕ್ಕು, ಬಾಟಲಿ, ಗುಟ್ಕಾದ ಪಾಕೀಟು ಮತ್ತು ಹೋದ ವರುಷ ಸುನಾಮಿಯಲ್ಲಿ ಕಾಣೆಯಾಗಿ ಸಿಕ್ಕದೇ ಹೋದ ಹಾಲುಗಲ್ಲದ ಮಗುವಿನ ಉಡಿದಾರ!

ಸಮುದ್ರ ಅಳುತ್ತದೆ,

ಬೇಕಾದರೆ ಅದರ ನೀರ ರುಚಿ ನೋಡಿ, ಎಷ್ಟೊಂದು ಉಪ್ಪುಪ್ಪು? ಅಷ್ಟೆಲ್ಲ ಜೀವವಾಹಿನಿ ನದಿಗಳು ಹರಿದರೂ ತಾನು ಉಪ್ಪುಪ್ಪು ಎಂದು ಬಿಕ್ಕಳಿಸುತ್ತದೆ, ಹುಣ್ಣಿಮೆಯ ಬೆಳಕಿನ ಪ್ರಚ್ಛನ್ನ ರಾತ್ರಿಯಲಿ ಕನವರಿಸಿಕೊಂಡು ಉಮ್ಮಳಿಸಿ ಬೇಯುತ್ತದೆ, ತನಗಾಗಿ, ನಿಮಗಾಗಿ, ನಿಮ್ಮ ನೆನಪುಗಳಿಗಾಗಿ, ನಿಮ್ಮೊಳಗಿನ ದುಃಖಕ್ಕಾಗಿ, ಅದನ್ನು ಸಹಿಸಲಾಗದ ನೋವಿನಿಂದಾಗಿ!

ಸಮುದ್ರ ಕೇಳಿಸಿಕೊಳ್ಳುತ್ತದೆ,

ಆ ಅನಿರ್ಬಂಧಿತ ಭೋರ್ಗರೆತದ ಮೊರೆತದ ನಡುವೆಯೂ ನಿಮ್ಮನ್ನು ಆಲಿಸುತ್ತದೆ. ಒಮ್ಮೆ ಮಾತು ಶುರುಮಾಡಿ ನೋಡಿ–ಸುಮ್ಮನೇ ತಲೆಯಾಡಿಸುತ್ತದೆ; ಹೇಷಾರವದ ಅನುಮೋದನೆ ಕೊಡುತ್ತದೆ; ಗಲಗಲನೆ ನಕ್ಕು ಒಪ್ಪಿಕೊಳ್ಳುತ್ತದೆ; ಕಣ್ಣಿನಲ್ಲಿ ನೀರು ತುಂಬಿಕೊಳ್ಳುವಷ್ಟು ಗಹಗಹಿಸಿಬಿಡುತ್ತದೆ!

ಸಮುದ್ರ ಸುಮ್ಮನಿರುತ್ತದೆ,

ಸುಮ್ಮನೆ ದಡದಗುಂಟ ಒಂಟಿಯಾಗಿ ನಡೆದು ನೋಡಿ–ನಿಮ್ಮ ಒಂಟಿತನಕ್ಕೆ ಕಾಡದ ಮೌನ ಸಂಗಾತಿಯಾಗುತ್ತದೆ. ಅಲೆಯಲೆಯಲ್ಲೂ ನೆನಪುಗಳು ಮರುಕಳಿಸುವಂತೆ ಮಾಡಿ, ಮತ್ತೆ ಹೊಸ ಅಲೆಗಳ ತಂದು ಚೆಲ್ಲಿ, ಹಳೇ ಅಲೆಗಳ ತೊಡೆದುಹಾಕಿ, ನಿಮ್ಮ ನೆನಪಿಗೆ ಮುದ ತರುತ್ತದೆ. ಬಿಳೀಮರಳ ಕುಣಿಯಲ್ಲಿ ಅಲೆ ಬಿಟ್ಟುಹೋದ ನೀರಿನಲ್ಲಿ ಇನ್ನೊಂದು ಅಲೆ ಬರುವ ಮುನ್ನ ನಿಮ್ಮ ಮುಖ ನೋಡಿಕೊಳ್ಳಿ–ನಸುನಗುತ್ತಿಲ್ಲವೇನು ನೀವು?

ಸಮುದ್ರ ನರ್ತಿಸುತ್ತದೆ,

ಪಾಪ! ಸ್ವಲ್ಪ ಹೊತ್ತು ನಿಂತು ನೋಡಿ. ಸಣ್ಣ ಮಗು ನಿಮ್ಮ ಮೆಚ್ಚುಗೆಗೆ ಕಾದಂತೆ–ತನಗೇ ತಾನೇ ಇಳಿ ಸಂಜೆಯ ಬಣ್ಣಗಳ ಓಕುಳಿ ಎರಚಿಕೊಳ್ಳುತ್ತ, ಹಲ್ಲು ಗಿಂಜುತ್ತ, ಸೊಟ್ಟಾಂಬಟ್ಟ ಅಲೆಗಳ ಹೆಜ್ಜೆಹಾಕುತ್ತ ಧೀಂ ಎಂದು ಕುಣಿಯುತ್ತದೆ; ಕುಪ್ಪಳಿಸುತ್ತದೆ. ಈ ಭಂಗಿ ಸರಿಯಿದೆಯೇ ಎಂದು ಕೇಳುತ್ತದೆ, ಹೇಳಿಬಿಡಿ–ನಿಮಗಿಷ್ಟವಾಯಿತೇ?

ಸಮುದ್ರ ನೆನಪಿಟ್ಟುಕೊಳ್ಳುತ್ತದೆ,

ಹಿಂತಿರುಗಿ ಹೊರಡುವ ಮುನ್ನ ನಿಂತೊಮ್ಮೆ ದಿಟ್ಟಿಸಿನೋಡಿ–ನೀವು ಊರಿಬಂದ ಹೆಜ್ಜೆ ಗುರುತುಗಳನ್ನು ಅದೆಷ್ಟು ಶ್ರದ್ಧೆಯಿಂದ ಆರಿಸಿ ಎತ್ತಿಟ್ಟುಕೊಳ್ಳುತ್ತಿದೆ ನೋಡಿ? ಹೆಜ್ಜೆ ಗುರುತುಗಳನ್ನೆಲ್ಲ ಆರಿಸಿ, ತನ್ನ ನೆನಪಿನ ಕೋಶದೊಳಕ್ಕೆ ಸೇರಿಸಿಕೊಂಡು ಮರಳ ಮೇಲಿಂದ ಅಳಿಸಿ, ಒರೆಸಿ ಹಾಕಿ ನಕ್ಕು ಬೀಳ್ಕೊಡುತ್ತಿದೆ–ಕೆನ್ನೆಯ ಮೇಲಿನ ಕಣ್ಣೀರನೊರೆಸಿಕೊಂಡು ನಸುನಕ್ಕು ವಿದಾಯ ಹೇಳುವ ಗೆಳತಿಯಂತೆ.

ಸಮುದ್ರ ಆವರಿಸಿಕೊಳ್ಳುತ್ತದೆ,

ಮೈಮರೆತು ನಿಂತ ನಿಮ್ಮ ಪಾದದ ಸುತ್ತಲಿನ ಮರಳನೆಲ್ಲ ಮೆಲ್ಲನೆ ಜರುಗಿಸಿ, ಕಾಲುಹಿಡಿದು, ಕೆಡವಿ, ಬರಸೆಳೆದಪ್ಪಿಕೊಳ್ಳಲು ಕಡೇ ಪ್ರಯತ್ನ ಮಾಡುತ್ತದೆ–ತನ್ನೊಡಲಿನ ಪ್ರೀತಿಯ ಉಪ್ಪು ನೀರನುಣಿಸಲು. ಆಗದಿದ್ದಲ್ಲಿ ಬೇಜಾರಿಲ್ಲ, ಈಗಾಗಲೇ ಆವರಿಸಿಕೊಂಡಾಗಿದೆ ಅದು ನಿಮ್ಮ ಹೃದಯವನ್ನು, ಮನಸ್ಸನ್ನು ಮತ್ತು ನೆನಪಿನ ಭಿತ್ತಿಯನ್ನು...

ಮತ್ತು...

ನೀವು ಹೊರಟುಹೋದ ಮೇಲೂ–ಸಮುದ್ರ ಕಾಯುತ್ತದೆ, ಮತ್ತೊಮ್ಮೆ, ನಿಮಗಾಗಿ!

ಹ್ಯಾವ್ ಎ ನೈಸ್ ಡೇ

ಶಿವಕುಮಾರ ಕೆ. ಎಸ್. shivu_ks@rediffmail.com